ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೆರಡನೆಯ ಅಧಿವೇಶನ
ಬುಧವಾರ, ದಿನಾಂಕ: 09ನೇ ಡಿಸೆಂಬರ್, 2020

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ವಸತಿ ಯೋಜನೆಗಳ ಕುರಿತು

ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) :-

222 (251) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಜವಾಹರ್ ಲಾಲ್ ನೆಹರು ನರ್ಮ್ (Jnurm)ಯಡಿಯಲ್ಲಿ ನಗರ ಬಡ ಜನರ ಮೂಲಭೂತ ಸೌಲಭ್ಯ ಯೋಜನೆ (BSUP) ಮತ್ತು ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಆಭಿವೃದ್ಧಿ ಯೋಜನೆ (IHSDP) ಹಾಗೂ ರಾಜೀವ್ ಆವಾಸ್ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಎಷ್ಟು ಯೋಜನೆಗಳನ್ನು ಕೈಗೊಂಡು ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ; (ಜಿಲ್ಲಾವಾರು/ ನಗರ ಪ್ರದೇಶಗಳವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ನಗರಗಳನ್ನು ಶೂನ್ಯ ಕೊಳಗೇರಿ ನಗರಗಳನ್ನಾಗಿ (ಕೊಳಗೇರಿ ಮುಕ್ತ ರಾಜ್ಯ ಯೋಜನೆಯಡಿ) ಮಾರ್ಪಾಡು ಮಾಡುವ ಯೋಜನೆಯ ಪ್ರಗತಿ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; (ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಹೊಸದಾಗಿ ಯಾವುದಾದರೂ ಕೊಳಗೇರಿಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಲಾಗಿದೆಯೇ/ಘೋಷಿಸಲಾಗಿದೆಯೇ; (ವಿವರ ನೀಡುವುದು)

(ಈ) ಕಳೆದ 5 ವರ್ಷಗಳಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ವತಿಯಿಂದ ಕೊಳಗೇರಿಗಳನ್ನು ಅಭಿವೃದ್ಧಿ ಪಡಿಸಲು ಎಷ್ಟು ಯೋಜನೆಗಳಿಗೆ ಸರ್ಕಾರ ಅನುಮೋದಿಸಿದೆ; ಪ್ರಸ್ತುತ ಚಾಲ್ತಿ ಇರುವ ಯೋಜನೆಗಳು ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಉ) ಜವಾಹರ್ ಲಾಲ್ ನೆಹರು ನರ್ಮ್ (Jnurm))ಯಡಿಯಲ್ಲಿ ವಾಸಿಸಲು ಯೋಗ್ಯ ಒಂದು ಮನೆಗಳ (Dwelling unit) ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರ ಹಾಗೂ ಫಲಾನುಭವಿಗಳ ವಂತಿಗೆ/ಪಾಲು/ಕಂತು ಎಷ್ಟು; (ವಿವರ ನೀಡುವುದು)

(ಊ) ಪ್ರಸ್ತುತ ಪ್ರಧಾನಮಂತ್ರಿ ಆವಾಸ್ ಮತ್ತು ಇತರೆ ಯೋಜನೆಯಡಿಯಲ್ಲಿ ವಾಸಿಸಲು ಯೋಗ್ಯವಾದ ಒಂದು ಮನೆಗೆ ((Dwelling unit) ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರ ಹಾಗೂ ಫಲಾನುಭವಿಗಳ ವಂತಿಗೆ/ಪಾಲು/ಕಂತು ಎಷ್ಟು (ವಿವರ ನೀಡುವುದು)